ದಿ: **05.11.2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

**ಪಾಟೀ ಸವಾಲು: ಶ್ರೀ ಹೆಚ್.ವಿ.ಆರ್ ವಕೀಲರಿಂದ**

ಸ.ನಂ. 195, 196, 197 ರಲ್ಲಿ ಒಟ್ಟು 16 ಎಕರೆ 24 ಗುಂಟೆ ಇದೆ ಎಂದರೆ ಸರಿ. ಗೋಪಮ್ಮ ರವರಿಗೆ ಸದರಿ ಆಸ್ತಿಗಳು ದಿಃ 26.03.1928 ರ ಕ್ರಯಪತ್ರದಂತೆ ಬಂದಿತ್ತು ಎಂದರೆ ಸರಿ. ಸದರಿ ಮೂರು ಆಸ್ತಿಗಳಲ್ಲಿ 8 ಎಕರೆ 16 ಗುಂಟೆ ಆಸ್ತಿಯನ್ನು ಗೋಪಮ್ಮರವರು ದಿಃ 21.03.1945 ರಲ್ಲಿ ವಾದಿಯ ತಂದೆ ಮುದ್ದಪ್ಪ ರವರಿಗೆ ಕ್ರಯ ಮಾಡಿಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು 7 ಎಕರೆ 24 ಗುಂಟೆಯನ್ನು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಮುದ್ದಪ್ಪ ರವರಿಗೆ ಗೋಪಮ್ಮ 8 ಎಕರೆ 16 ಗುಂಟೆಯ ಬದಲಾಗಿ 7 ಎಕರೆ 24 ಗುಂಟೆ ಜಮೀನನ್ನು ಕ್ರಯಕ್ಕೆ ಕೊಟ್ಟಿದ್ದಾರೆ ಎಂದು ತೋರಿಸಲು ಯಾವುದೇ ಕ್ರಯಪತ್ರದ ನಕಲನ್ನು ಪಡೆದಿಲ್ಲ. ಮುದ್ದಪ್ಪ ರವರಿಗೆ ಮೇಲ್ಕಂಡ ಮೂರು ಸರ್ವೆ ನಂಬರ್ ಗಳಲ್ಲಿ ಒಟ್ಟು 8 ಎಕರೆ 16 ಗುಂಟೆ ವಿಸ್ತೀರ್ಣದ ಜಮೀನನ್ನು ಕೊಟ್ಟ ಬಗ್ಗೆ ಕ್ರಯಪತ್ರವನ್ನು ನೋಡಿಲ್ಲ. ವಾದಿಯು ದಾವಾ ಹಾಕಿದ ವೇಳೆಯಲ್ಲಿ ದಾವಾದ ಲಗತ್ತು ದಿಃ 21.03.1945 ರ ಕ್ರಯಪತ್ರದ ಪ್ರತಿಯನ್ನು ಸಲ್ಲಿಸಿದ್ದು ಆ ವೇಳೆಯಿಂದ ಈವರೆಗೂ ನಾನಾಗಲೀ ಅಥವಾ ನನ್ನ ವಕೀಲರ ಮೂಲಕವಾಗಲೀ ಸದರಿ ಕ್ರಯಪತ್ರವನ್ನು ತೆಗೆಸಿ ನೋಡಿಲ್ಲ. ದಿಃ 21.03.1945 ರಲ್ಲಿ ವಾದಿಯ ತಂದೆ ಮುದ್ದಪ್ಪ 8 ಎಕರೆ 16 ಗುಂಟೆ ಸ್ವತ್ತನ್ನು ಕ್ರಯಕ್ಕೆ ಪಡೆದಿದ್ದಾರೋ ಅಥವಾ 7 ಎಕರೆ 24 ಗುಂಟೆ ಆಸ್ತಿಯನ್ನು ಕ್ರಯಕ್ಕೆ ಪಡೆದಿದ್ದಾರೋ ಎಂಬ ಬಗ್ಗೆ ಗುಂಡ್ಲುಪೇಟೆಯ ಸಬ್ ರಿಜಿಸ್ಟ್ರಾರ್ ಕಛೇರಿಗೆ ಹೋಗಿ ಸದರಿ ದಾಖಲಾತಿಯ ನಕಲನ್ನು ಪಡೆದು ಪರಿಶೀಲನೆ ಮಾಡಿಲ್ಲ.

ವಾದಿಯ ತಂದೆ ಮುದ್ದಪ್ಪ 1945 ರಲ್ಲಿ ಕ್ರಯಕ್ಕೆ ಪಡೆದ ನಂತರ ಸದರಿ ಆಸ್ತಿಯನ್ನು ಎಂ.ಆರ್ ನಂ. 17/1944-45 ರಂತೆ ಹಕ್ಕು ಬದಲಾವಣೆ ಮಾಡಿಕೊಂಡಿರುವ ಬಗ್ಗೆ ನನಗೆ ಗೊತ್ತಿಲ್ಲ. ವಾದಿಯು ದಾವಾ ಹಾಕಿದ ನಂತರ ಎಂ.ಆರ್ 17/1944-45 ರ ದಾಖಲಾತಿಯನ್ನು ಪಡೆದು ಪರಿಶೀಲನೆ ಮಾಡಿಲ್ಲ. ಆ ರೀತಿ ಕ್ರಯಪತ್ರವನ್ನು ಮತ್ತು ಮ್ಯುಟೇಷನ್ ಅನ್ನು ಪರಿಶೀಲನೆ ಮಾಡಲು ತೊಂದರೆ ಇರಲಿಲ್ಲ. ಸ.ನಂ. 195, 196, 197 ಸರ್ವೆ ನಂಬರ್ ಗಳು ಒಂದಕ್ಕೊಂದು ಹೊಂದಿಕೊಂಡಂತೆ ಇರುವ ಬಾಜು ಜಮೀನುಗಳು ಎಂದರೆ ಸರಿ. ಸ.ನಂ. 195 ಈ ಮೂರು ಆಸ್ತಿಗಳಲ್ಲಿ ಉತ್ತರ ಪಾರ್ಶ್ವಕ್ಕೆ ಇದೆ ಎಂದರೆ ಸರಿ. ಸ.ನಂ. 195 ರ ದಕ್ಷಿಣದ ಕಡೆಗೆ ಸ.ನಂ. 196 ಬರುತ್ತದೆ ಎಂದರೆ ಸರಿ. ಅದೇ ರೀತಿ ಸ.ನಂ. 196 ರ ದಕ್ಷಿಣಕ್ಕೆ 197 ಬರುತ್ತದೆ ಎಂದರೆ ಸರಿ.

ಮಹದೇವಪ್ಪ ನನ್ನ ಚಿಕ್ಕಪ್ಪ. ನನ್ನ ಚಿಕ್ಕಪ್ಪ ಮಹದೇವಪ್ಪ ಸ.ನಂ. 196/1 ರಲ್ಲಿ 3 ಎಕರೆ 26 ಗುಂಟೆಯನ್ನು, ಸ.ನಂ. 197/1 ರಲ್ಲಿ 1 ಎಕರೆ 27 ಗುಂಟೆಯನ್ನು ಶಿವಪ್ಪ ಬಿನ್ ಚಿಕ್ಕಲಿಂಗಪ್ಪನಿಂದ

ಕ್ರಯಕ್ಕೆ ಪಡೆದಿದ್ದಾರೆ. ದಿಃ 03.03.1982 ರಲ್ಲಿ ನನ್ನ ಚಿಕ್ಕಪ್ಪ ಮೇಲ್ಕಂಡ ಆಸ್ತಿಯನ್ನು ಕ್ರಯಕ್ಕೆ ಪಡೆದಿರುತ್ತಾರೆ. ನನ್ನ ಚಿಕ್ಕಪ್ಪ ಶಿವಪ್ಪನಿಂದ ಆಸ್ತಿ ಪಡೆಯುವ ಮೊದಲು ಶಿವಪ್ಪನಿಗೆ ಸದರಿ ಆಸ್ತಿಗಳು ಹೇಗೆ ಬಂತು ಎಂಬುದನ್ನು ನಾನು ತಿಳಿದುಕೊಂಡಿಲ್ಲ. ನನ್ನ ಚಿಕ್ಕಪ್ಪನಿಗೆ ಮಾರಾಟ ಮಾಡಿದ ಆಸ್ತಿಗಳು ಶಿವಪ್ಪನಿಗೆ ಹೇಗೆ ಬಂತು ಎಂಬ ಬಗ್ಗೆ ಸಂಬಂಧಪಟ್ಟ ರೆವಿನ್ಯೂ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ಶಿವಪ್ಪನಿಗೆ ಹೇಗೆ ವರ್ಗಾವಣೆಯಾಗಿ ಬಂತು ಎಂಬ ಬಗ್ಗೆ ಹಕ್ಕಿನ ವರ್ಗಾವಣೆಯ ದಾಖಲಾತಿಯನ್ನು ಹಾಜರು ಪಡಿಸಿಲ್ಲ.

ನಾನು ಹಾಜರು ಪಡಿಸಿರುವ ನಿಡಿ 1 ರಿಂದ 6 ರಲ್ಲಿರುವ ಎಂ.ಆರ್ ನಂ. 16/2012-13 ರ ಖಾತೆ ಆದೇಶ ಯಾವ ಆಧಾರದ ಮೇರೆಗೆ ಆಗಿದೆ ಎಂಬ ಬಗ್ಗೆ ದಾಖಲಾತಿ ಹಾಜರು ಪಡಿಸಿಲ್ಲ. ನಿಡಿ 1 ರಿಂದ 6 ರ ಆಸ್ತಿಗಳು ಪೋಡಾಗುವಾಗ ಅಳತೆ ಪ್ರಕ್ರಿಯೆ ನಡೆಯುತ್ತದೆ ಎಂದರೆ ಸರಿ. ಅಳತೆ ಕಾರ್ಯ ಮಾಡುವಾಗ ಸ್ವತ್ತಿನ ಬಾಜುದಾರರಿಗೆ ನೋಟೀಸ್ ಕೊಡುವುದು ಸಾಮಾನ್ಯ ಎಂದರೆ ಸರಿ. ನಿಡಿ 1 ರಿಂದ 6 ರ ಆಸ್ತಿಗಳ ಪೂರ್ವ ಬಾಜುವಿನಲ್ಲಿ ವಾದಿಗೆ ಸೇರಿದ ಆಸ್ತಿ ಇದೆ ಎಂದರೆ ಸರಿ. ನಿಡಿ 1 ರಿಂದ 6 ರ ಪೋಡಾಗುವಾಗ ಸರ್ವೆ ನಡೆಸುವ ವೇಳೆಯಲ್ಲಿ ವಾದಿ ಮತ್ತು ಇತರೆ ಬಾಜುದಾರರಿಗೆ ನೋಟೀಸ್ ಕೊಟ್ಟ ಬಗ್ಗೆ ದಾಖಲಾತಿ ಹಾಜರು ಪಡಿಸಿಲ್ಲ. ಸರ್ವೆ ನಡವಳಿಕೆಯ ದಾಖಲಾತಿಯನ್ನು ತಂದು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇಲ್ಲ. ನಿಡಿ 1 ರಿಂದ 6 ರ ದಾಖಲಾತಿಗಳಲ್ಲಿ ಕಂಡುಬರುವ ಪೋಡುಗಳ ಬಗ್ಗೆ ವಾದಿಯರ ಗಮನಕ್ಕೆ ಬಂದಿಲ್ಲ ಮತ್ತು ನಾವು ಗಮನಕ್ಕೆ ತಾರದಂತೆ ಮಾಡಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಿಡಿ 7 ರ ಅಸಲು ಕ್ರಯಪತ್ರದ ಕಳೆದುಹೋಗಿದೆ ಈ ಕಾರಣದಿಂದ ದೃಢೀಕೃತ ನಕಲನ್ನು ಹಾಜರು ಪಡಿಸಿದ್ದೇನೆ. ಅಸಲು ಕ್ರಯಪತ್ರ ಕಳೆದುಹೋದ ಬಗ್ಗೆ ಲಿಖಿತ ತಕರಾರಿನಲ್ಲಿ ಮತ್ತು ಪ್ರಮಾಣ ಪತ್ರದಲ್ಲಿ ಹೇಳಿಲ್ಲ ಎಂದರೆ ಸರಿ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಶ್ರೀ ಹೆಚ್.ವಿ.ಆರ್ ವಕೀಲರು ಸಮಯಾವಕಾಶ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ಶಿವಕುಮಾರ ಜಿ.ಜೆ)

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,

ಗುಂಡ್ಲುಪೇಟೆ